**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1444/2022**

| | | | |
|---|---|---|---|
| **ಹೆಸರು** | **:** | **ಗಾಳಪ್ಪ** | ಚಾ.ಸಾ. 2 |
| **ತಂದೆಯ ಹೆಸರು** | **:** | **ಬಸಪ್ಪ** | ಪ್ರಾ.ಸಾ. 1 |
| **ವಯಸ್ಸು** | **:** | **70 ವರ್ಷ** | ದಿನಾಂಕಃ 13-10-2025 |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ತೇಗಲತಿಪ್ಪಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-3 ರವರು ನನಗೆ ಗೊತ್ತು. ಚಾಸಾ-1ರವರು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು, ಚಾಸಾ-3 ರವರು ಇದ್ದೇವೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 1-2 ಗಂಟೆ ಸುಮಾರಿಗೆ ತೇಗಲತಿಪ್ಪಿಯಲ್ಲಿರುವ ಟವರ ಹತ್ತಿರ ಪೊಲೀಸರು ಬಂದಾಗ ಪೋಲಿಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕಾಗಿ ಸಹಿ ಬೇಕಾಗಿರುವ ಬಗ್ಗೆ ಪೋಲಿಸರು ನನಗೆ ತಿಳಿಸಿಲ್ಲ. ಪೋಲಿಸರು ನನಗೆ ನಿಪಿ-1ರ ವಿಷಯವನ್ನು ಓದಿ ಹೇಳಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 17-05-2022 ರಂದು ಬೆಳಗ್ಗೆ 9 ಗಂಟೆಗೆ ಪೋಲಿಸರು ಕಳ್ಳತನವಾದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಗ ಚಾಸಾ-1ರವರು ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ಗೊತ್ತಿದ್ದರು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ 4ನೇ ಆರೋಪಿ ಪರವಾಗಿ ಶ್ರೀ SBK ವಕೀಲರಿಂದಃ**</u> ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**